ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತೆಂಟನೆಯ ಅಧಿವೇಶನ

ಸೋಮವಾರ, ದಿನಾಂಕ : 22ನೇ ಜುಲೈ, 2019

ನೈಸರ್ಗಿಕ ವಿಕೋಪದಿಂದ ಆದ ಬೆಳೆ ನಷ್ಟ ಪರಿಹಾರ ಕುರಿತು

ಡಾ॥ ವೈ. ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-

467 (673) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಳೆ ಹಾನಿ ಮತ್ತು ಇತರೆ ನೈಸರ್ಗಿಕ ವಿಕೋಪದಿಂದ ಬೆಳೆಗಳು ಹಾನಿಗೆ ಒಳಗಾದಲ್ಲಿ ಸರ್ಕಾರದಿಂದ ಪ್ರತಿ ರೈತರಿಗೆ ನೀಡುತ್ತಿರುವ ಪರಿಹಾರಧನದ ಮೊತ್ತ ಎಷ್ಟು ; (ವಿವರಗಳನ್ನು ನೀಡುವುದು)

(ಆ) ಈ ರೀತಿ ಬೆಳೆ ನಷ್ಟಕ್ಕೆ ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ತೊಂದರೆಗೊಳಗಾಗಿರುವ ರೈತರ ಸಂಖ್ಯೆ ಎಷ್ಟು ; ಬೆಳೆ ನಷ್ಟದ ಪ್ರಮಾಣ ಎಷ್ಟು ; ಹಾಗೂ ಸರ್ಕಾರದಿಂದ ಬಿಡುಗಡೆಯಾಗಿರುವ ಮತ್ತು ಬಾಕಿ ಉಳಿಸಿಕೊಂಡಿರುವ ಪರಿಹಾರ ಧನದ ಮೊತ್ತ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಇ) ಪ್ರಧಾನಮಂತ್ರಿ ಸುರಕ್ಷಾ ಭೀಮಾ ಯೋಜನೆಯಡಿ ಬೆಳೆ ವಿಮೆ ಮಾಡಿಸಲು ಅರ್ಜಿ ಸಲ್ಲಿಸಿರುವ ರೈತರ ಸಂಖ್ಯೆ ಎಷ್ಟು ; ಇದರಲ್ಲಿ ವಿಮೆ ಪಡೆದ ರೈತರು ಮತ್ತು ಪಡೆದಿರುವ ವಿಮೆಯ ಮೊತ್ತವೆಷ್ಟು; (ವಿವರಗಳನ್ನು ನೀಡುವುದು)

(ಈ) ಈ ಯೋಜನೆಯಡಿ ಅರ್ಜಿ ಸಲ್ಲಿಸಿಯೂ ವಿಮೆ ಪಡೆಯದ (ನೀಡದ) ರೈತರ ಸಂಖ್ಯೆ ಎಷ್ಟು ; ಇದಕ್ಕೆ ಕಾರಣಗಳೇನು ? (ಮಾಹಿತಿ ನೀಡುವುದು)